

ಡಾ.ವಿನೋದ ಛೆಬ್ಬಿ

ಗಂಭೀರವಾಗಿ ಯೋಚಿಸಿ: ನಾವೇಕೆ ಕಾಮಕ್ರಿಯೆ ನಡೆಸುತ್ತೇವೆ?

# 292: ಹೊಸ ದಾರಿ - 32

ಕಾಮಕ್ರಿಯೆಯಲ್ಲಿ ಸೃಜನಶೀಲತೆಯನ್ನು ತರಬೇಕಾದರೆ ಸಂಗಾತಿಯ ನಕಾರಾತ್ಮಕ ಭಾವನೆಗಳೊಂದಿಗೆ ಗಂಟುಹಾಕಿಕೊಂಡು ಒದ್ದಾಡುವುದನ್ನು ಬಿಟ್ಟು ವ್ಯಕ್ತಿ ಪ್ರತ್ಯೇಕತೆಯನ್ನು ಉಳಿಸಿಕೊಳ್ಳುತ್ತ ಹೊಸ ದಾರಿ ಹಿಡಿಯುವುದು ಅಗತ್ಯವಿದೆಯೆಂದು ಕಂಡುಕೊಂಡೆವು. ಈಸಲ ಕಾಮಕ್ರಿಯೆಯ ಅಂತರಾರ್ಥವನ್ನು ಗ್ರಹಿಸಲು ನೋಡೋಣ. ಸಂದರ್ಭ: ಮಾಯಾ– ಮನೋಜ ದಣಿದು ಹಾಸಿಗೆಗೆ ಸೇರಿದ್ದಾರೆ. ಆಯಾಸ ಪರಿಹಾರಕ್ಕಾಗಿ ಕಾಮಕ್ರಿಯೆ ಶುರುಮಾಡಿದ್ದಾರೆ. ಸುಮಾರು ಹೊತ್ತಾದರೂ ಮಾಯಾಳಿಗೆ ಜನನಾಂಗ ಒದ್ದೆಯಾಗದೆ, ಮನೋಜನಿಗೆ ಸ್ಖಲನವಾಗದೆ ಬರುಬರುತ್ತ ಕ್ರಿಯೆ ಸ್ಥಗಿತವಾಗಿದೆ. ಮಾಯಾ ಸೊಳ್ಳೆಪರದೆಯ ತೂತುಗಳನ್ನು ನೋಡುತ್ತ, 'ಯಾಕಾದರೂ ಇದಕ್ಕೆ ಕೈಹಾಕಿದೆವೋ' ಎಂದೆನ್ನುವಾಗ ಮನೋಜ ಬೆವರು ಒರೆಸಿಕೊಳ್ಳುತ್ತ ಹಳಹಳಿಸುತ್ತಾನೆ. ಹಗುರವಾಗಬೇಕಾದ ಮೈಗಳು ಭಾರವಾಗಿವೆ.

ಇಲ್ಲಿ ಮಾಯಾಳ, 'ಯಾಕಾದರೂ' ಎನ್ನುವ ಪ್ರಶ್ನೆಯಲ್ಲಿರುವ ನಕಾರವನ್ನು ತೆಗೆದುಹಾಕಿ ಯೋಚಿಸುತ್ತಿದ್ದೇನೆ: ಹೌದು, ಜನರು ಕಾಮಕ್ರಿಯೆಯನ್ನು ಯಾಕೆ ನಡೆಸುತ್ತಾರೆ ಪ್ರಶ್ನೆ ಸರಳ ಎನಿಸಿದರೂ ಜಿಜ್ಞಾಸೆ ನಡೆಸುವುದು ಅಗತ್ಯವಾಗಿದೆ ಎಂದೆನಿಸುತ್ತದೆ. ಕಾಮಕ್ರಿಯೆಯ ಉದ್ದೇಶವೇನು? ಅದರಿಂದ ಏನು ಸಿಗುತ್ತದೆ? ಮೂರು ಉತ್ತರಗಳಂತೂ ಸರ್ವವ್ಯಾಪಿಯಾಗಿವೆ: ಕಾಮತೃಪ್ತಿ, ಸಂತಾನೋತ್ಪತ್ತಿ ಹಾಗೂ ಬಾಂಧವ್ಯದ ಹೆಚ್ಚಳ. ಮತ್ತೇನಿವೆ ಎಂದು ನೋಡೋಣ.

1) ನಲಿವಿನಾಟ: ಕಾಮಕ್ರಿಯೆಯು ಖುಷಿಪಡುವ ಶಾರೀರಿಕ ಚಟುವಟಿಕೆಯ ಆಟ. ಎಲ್ಲವೂ ನಕ್ಕು ನಲಿಯುವ ಆಟವಾದರೆ ಇದೊಂದು ನಗದೇ ನಲಿಯುವ ಆಟ. ವಾರಕ್ಕೆ 2–3 ಸಲ ನಡೆಯುವ ಕೂಟವು ವ್ಯಾಯಾಮದ ಹೆಚ್ಚಿನ ಅಗತ್ಯವನ್ನು ಪೂರೈಸುತ್ತದೆ ಎಂದು ಸಂಶೋಧನೆ ಹೇಳುತ್ತದೆ.

2) ಸಂತಾನೋತ್ಪತ್ತಿ: ವಿಚಿತ್ರವೆಂದರೆ ಗರ್ಭಧಾರಣೆಯು ಸಂಭೋಗದ ನೇರ ಪರಿಣಾಮವಲ್ಲ, (ಔಷಧಿಗಳಿಂದ ಆಗುವಂತೆ) ಅಡ್ಡ ಪರಿಣಾಮ! ಯಾಕೆ? ವರ್ಷಗಟ್ಟಲೆ ನಡೆಯುವ ಸಂಭೋಗಗಳಲ್ಲಿ ಯಾವುದರಲ್ಲಿ ಗರ್ಭ ಕಟ್ಟುತ್ತದೆ ಎಂದು ಹೇಳಲಾಗುವುದಿಲ್ಲ. ಸಾಕಾಗದ್ದಕ್ಕೆ ಇತ್ತೀಚೆಗೆ ಗರ್ಭಧಾರಣೆಯು ಸಂಭೋಗದ ಮೂಲಕ ಆಗುವುದು ಕಡಿಮೆಯಾಗುತ್ತಿದೆ – ವ್ಯಾಪಕವಾಗಿ ಹುಟ್ಟಿಕೊಂಡಿರುವ ಗರ್ಭಧಾರಣೆಯ ಕೇಂದ್ರಗಳೇ ಇದನ್ನು ಸಂಭ್ರಮದಿಂದ ನಿರ್ವಹಿಸುತ್ತಿವೆ. ಹಾಲು ಪ್ಯಾಕೆಟ್‌ನಿಂದ, ನೀರು ಬಾಟಲಿಯಿಂದ ಬರುವಂತೆ ಮಕ್ಕಳು ಸಂತಾನೋತ್ಪತ್ತಿಯ ಕೇಂದ್ರದಿಂದ ಬರುವಂತಾಗಿದೆ. ಶಿಶ್ನದೌರ್ಬಲ್ಯ, ಯೋನಿಸೆಡೆತದಂಥ ಸಮಸ್ಯೆ ಇದ್ದರಂತೂ ದಂಪತಿಗಳು ಬಗೆಹರಿಸಲು ಕಾಯದೆ ಈ ಕೇಂದ್ರಗಳಿಗೆ ಧಾವಿಸುತ್ತಿದ್ದಾರೆ. ಪರಿಣಾಮ? ಗಂಡ ಹೆಂಡಿರ ಮಿಲನ ಮನೆಯಲ್ಲಿ ನಡೆದರೂ (ಅಥವಾ ನಡೆಯದಿದ್ದರೂ) ಅಂಡಾಣು–ವೀರ್ಯಾಣುಗಳ ಮಿಲನ ಆಸ್ಪತ್ರೆಯಲ್ಲಿ ನಡೆಯುತ್ತದೆ!

3) ಬೇಸರ, ಆಯಾಸ, ನಿದ್ರೆಗೆ ಮಾತ್ರೆ: ಕೊರೊನಾದ ಕಾರಣದಿಂದ ಗೃಹಬಂಧನಕ್ಕೆ ಒಳಗಾದ ದಂಪತಿಗಳಲ್ಲಿ ಕಾಮಕ್ರಿಯೆ ಹೆಚ್ಚಾಗಿ ನಡೆಯುತ್ತಿದೆ ಎಂದು ಊಹಾಪೋಹವಿದೆ (ಇದರ ನಿಜಾಂಶವನ್ನು ಕಾಣಲು ಇನ್ನೂ ಒಂಬತ್ತು ತಿಂಗಳು ಕಾಯಬೇಕಿದೆ). ಕಾಮಕ್ರೀಡೆಯಲ್ಲಿ ಡೋಪಮೈನ್, ಎಂಡಾರ್ಫಿನ್, ಆಕ್ಸಿಟೋಸಿನ್ ಮುಂತಾದ ರಾಸಾಯನಿಕಗಳ ನೆರೆಹಾವಳಿಯಾಗಿ ಮನಗಳು ರೋಚಕ ಮುದದಲ್ಲಿ, ಹೃದಯಗಳು ಬೆಚ್ಚನೆಯ ತಂಪಿನಲ್ಲಿ ಮುಳುಗುತ್ತವೆ. ಇದೇ ಉದ್ದೇಶದಿಂದ ಮಾಯಾ–ಮನೋಜ ಕೂಟಕ್ಕೆ ಮೈ ಒಪ್ಪಿಸಿದ್ದಾರೆ. ಬೇಕಾದುದು ಸಿಗದಿರುವ ಕಾರಣವನ್ನು ಆಮೇಲೆ ನೋಡೋಣ.

4) ಸಂಬಂಧಕ್ಕೆ ಅರ್ಥ: ಇಲ್ಲೊಬ್ಬಳಿಗೆ ಗಂಡನ ಬಗೆಗೆ ತೀವ್ರ ಅಸಮಾಧಾನವಿದೆ. ಅವಳ ಬಾಯಿಂದಲೇ ಕೇಳಿ: 'ಇವನು ಅಚ್ಚುಕಟ್ಟುತದ ಶತ್ರು. ಶೌಚ ಮುಗಿಸಿ ನೀರು ಹಾಕದಿರುವ, ಸ್ನಾನ ಮುಗಿಸಿ ಟವೆಲನ್ನು ಹಾಸಿಗೆಯ ಮೇಲೆ ಬಿಟ್ಟುಬಿಡುವ, ಹೊರಗಿನಿಂದ ಬಂದು ಕಾಲುಚೀಲಗಳನ್ನು ಎಲ್ಲೆಂದರಲ್ಲಿ ಬಿಸಾಕುವ ವರ್ತನೆಯನ್ನು ನೋಡಿದರೆ ಎರಡು ಕೊಡಬೇಕು ಎನಿಸುತ್ತದೆ. ಆದರೆ ತೃಪ್ತಿಕರ ಕೂಟವಾದ ಮರುದಿನ ಇದೆಲ್ಲ ಗಮನಿಸಿದಾಗ ಇವನ ಹಾಜರಿ ಎಲ್ಲೆಲ್ಲೂ ಕಂಡು ಮೈ ಪುಳಕಗೊಳ್ಳುತ್ತದೆ.' ಕೂಟದ ಮುಂಚಿನ ಕಲಹವೊಂದನ್ನು ಕೂಟದ ನಂತರ ವಿಶ್ಲೇಷಿಸಿದಾಗ ಹೊಸ ಅರ್ಥವೇ ಬರುತ್ತದೆ.

5) ಲಿಂಗೀಯತೆಯ ಪಾತ್ರ ನಿರ್ವಹಣೆ: ಒಂದು ವ್ಯಕ್ತಿಯನ್ನು 'ಹೆಣ್ಣು ಮಾತ್ರ' ಅಥವಾ 'ಗಂಡು ಮಾತ್ರ' ಎಂದು ಧ್ರುವೀಕರಿಸುವುದು ವ್ಯವಸ್ಥೆಯಲ್ಲಿದೆ. ಅದಕ್ಕೆ ತಕ್ಕಂತೆ ಮುನ್ನುಗ್ಗುವ ಗಂಡು ಹಾಗೂ ನಾಚಿಕೊಳ್ಳುವ ಹೆಣ್ಣು ಪಾತ್ರ ಮಾದರಿ ಎನಿಸಿಕೊಳ್ಳುತ್ತಾರೆ. ಇಲ್ಲವಾದರೆ ಹೆಣ್ಣಿಗ, ಗಂಡುಬೀರಿ ಎನ್ನುವ ವಿಶೇಷಣಗಳು ಹಿಂಬಾಲಿಸುತ್ತವೆ. (ಇದೇ ಕಾರಣದಿಂದ ಸಲಿಂಗಿಗಳು, ಲಿಂಗಾಂತರಿಗಳು ಮೂಲೆಗುಂಪಾಗುತ್ತಾರೆ) ಧ್ರುವೀಕರಣದ ಪ್ರಭಾವವು ಕಾಮಕೂಟದಲ್ಲೂ ಎದ್ದುಕಾಣುತ್ತ, ಗಂಡುಹೆಣ್ಣುಗಳ ಕಾರ್ಯಸಾಮರ್ಥ್ಯದ ಪ್ರದರ್ಶನ ನಡೆಯುತ್ತದೆ. ಆಗ ಶಿಶ್ನದೌರ್ಬಲ್ಯ, ಯೋನಿಸೆಡೆತ ಮುಂತಾದ ಚಿಕ್ಕಪುಟ್ಟ ಸಮಸ್ಯೆ ಎದುರಾದರೆ ಲಿಂಗತ್ವವನ್ನು ಕಳೆದುಕೊಂಡಷ್ಟು ವ್ಯಥಿಸುತ್ತಾರೆ. ವಾಸ್ತವವಾಗಿ, ಪ್ರತಿ ಹೆಣ್ಣಿನಲ್ಲಿ ಗಂಡಿನಂಶವೂ ಪ್ರತಿ ಗಂಡಿನಲ್ಲಿ ಹೆಣ್ಣಿನಂಶವೂ ಇರುತ್ತದೆ. ಇನ್ನೊಂದು ಲಿಂಗತ್ವದ ಅಂಶ ಹೆಚ್ಚಾಗಿದ್ದಷ್ಟೂ ಸಂಗಾತಿಯನ್ನು ಅರ್ಥಮಾಡಿಕೊಳ್ಳುವುದು ಹೆಚ್ಚುತ್ತದೆ. ಈ ಆಧಾರದ ಮೇಲೆ ಗಂಡು–ಹೆಣ್ಣುಗಳ ಧ್ರುವೀಕರಣವು ಮಸುಕಾಗುತ್ತ ಶ್ರೇಣೀಕರಣವು (sexuality spectrum) ಕಾಲಿಡುತ್ತಿದೆ. ಇಲ್ಲಿ ಲಿಂಗೀಯತೆಯನ್ನು ಒಂದು ಸಾಲು ಎಂದುಕೊಂಡರೆ, ಸಾಲಿನ ಒಂದು ತುದಿಯಲ್ಲಿ ಮುನ್ನುಗ್ಗುವ ಗಂಡುತನವಿದ್ದರೆ ಇನ್ನೊಂದು ತುದಿಯಲ್ಲಿ ಮೃದು ಹೆಣ್ಣುತನವಿದೆ. ಹೆಣ್ಣೇ ಆಗಲೇ ಗಂಡೇ ಆಗಲಿ ಎರಡು ತುದಿಗಳ ನಡುವೆ ಎಲ್ಲಾದರೂ ಬರಬಹುದು. ಅಷ್ಟಲ್ಲದೆ ವಯಸ್ಸಿಗೆ ತಕ್ಕಂತೆ ಸ್ಥಾನವನ್ನು ಬದಲಾಯಿಸಬಹುದು. ಉದಾ. 22ನೇ ವಯಸ್ಸಿನಲ್ಲಿ ತರುಣನೊಬ್ಬ ಶೇ 95ರಷ್ಟು ಗಂಡು ಹಾಗೂ ಶೇ 5ರಷ್ಟು ಹೆಣ್ಣು ಎನ್ನಿಸಿಕೊಂಡರೆ 65ನೇ ವಯಸ್ಸಿನಲ್ಲಿ ಶೇ 60ರಷ್ಟು ಗಂಡಾಗಿಯೂ ಶೇ. 40ರಷ್ಟು ಹೆಣ್ಣಾಗಿಯೂ ಇರಬಹುದು. ಭವಿಷ್ಯದಲ್ಲಿ ಅರ್ಜಿಯಲ್ಲಿ ಲಿಂಗಸೂಚಕವಾಗಿ ಹೆಣ್ಣು:ಗಂಡು ಎಂದು ಅನುಪಾತವನ್ನು ನಮೂದಿಸುವ ಪದ್ಧತಿ ಜಾರಿಯಲ್ಲಿ ಬರಲೂಬಹುದು – ಹಾಗಾದಲ್ಲಿ ಈಗಿರುವ ತೃತೀಯ ಲಿಂಗದ ಪರಿಕಲ್ಪನೆಯೇ ಮಾಯವಾದೀತು!

6) ಪಾರಮ್ಯದ ರಾಜಕಾರಣ: 'ನಿನಗೆ ನಿನ್ನ ಲಿಂಗತ್ವಕ್ಕಿಂತ ನನಗೆ ನನ್ನ ಲಿಂಗತ್ವ ದೊಡ್ಡದು!' ಎನ್ನುವ ಅಹಮಿಕೆಯು ಅನೇಕರಲ್ಲಿ ಅಂತರ್ಗತವಾಗಿರುತ್ತದೆ. ಪರಿಣಾಮವಾಗಿ, ಆಕರ್ಷಕಳಾಗಿ ಮೆರೆಯುವ ಹೆಣ್ಣನ್ನು ಕೂಟದಲ್ಲಿ ಕನಿಷ್ಠ ಮಾಡುವುದರ ಮೂಲಕ ಗಂಡು ಪಾರಮ್ಯ ಮೆರೆಯಬಹುದು. ಗಂಡು ಶಿಶ್ನದಿಂದ ಒತ್ತಾಯಿಸುವಾಗ ಹೆಣ್ಣು ಪ್ರತಿರೋಧಿಸಿ ಪಾರಮ್ಯ ಮೆರೆಯಬಹುದು. ಆಗವನು ಅಸಹಾಯಕತೆಯಿಂದ ಅವಳ ಕರಾರುಗಳಿಗೆ ಒಪ್ಪುವ ತನಕ ಕೂಟ ನಡೆಯಲಿಕ್ಕಿಲ್ಲ. ಇಲ್ಲೊಬ್ಬಳು ಗಂಡಿನಮೇಲೆ ಕೂತುಕೊಂಡು ತುರುಬು ಕಟ್ಟಿಕೊಂಡು ತಳ್ಳಲು ಶುರುಮಾಡುವಾಗ ಅವನ ಗಟ್ಟಿಶಿಶ್ನ ಮೆತ್ತಗಾಗುತ್ತದೆ. ಇನ್ನು, ಗರ್ಭಧಾರಣೆಗಾಗಿ ಸಂಭೋಗಕ್ಕೆ ಬೇಡಿಕೆ ಬಂದಾಗ ಇಬ್ಬರೂ ಬಲ ಕಳೆದುಕೊಳ್ಳಬಹುದು. ಇಲ್ಲೆಲ್ಲ ಸ್ವಂತ ಲಿಂಗೀಯತೆಯ ಬಗೆಗೆ ಪಾರಮ್ಯವೋ ಕೀಳರಿಮೆಯೋ ಎದ್ದುಕಾಣುತ್ತದೆ.

ಇವೆಲ್ಲ ಸರಳ ಕಾರಣಗಳಾಯಿತು. ಗಹನಗಂಭೀರವಾಗಿರುವ ಕಾರಣಗಳು ಹಲವಿವೆ. ಅವುಗಳನ್ನು ಮುಂದಿನ ಸಲ ಚರ್ಚಿಸೋಣ.

ಪ್ರಯೋಗ 27: ಸಂಗಾತಿಯೊಂದಿಗೆ 'ನಿನ್ನನ್ನು ಪ್ರೀತಿಸುತ್ತೇನೆ, ಅದಕ್ಕಾಗಿ...' ಎನ್ನುವ ಕಾರಣವನ್ನು ಬದಿಗಿಟ್ಟು, ಮೇಲೆ ಹೇಳಿದ ಯಾವ ಕಾರಣಗಳು ಕಾಮಕೂಟದ ಹಿನ್ನೆಲೆಯಲ್ಲಿ ಇವೆಯೆಂದು ಮಾತಾಡಿಕೊಳ್ಳಿ. ಕೂಟದ ನಂತರ ಮುಂಚಿನ ಕಲಹವೊಂದರ ಪುನರ್ವಿಮರ್ಶೆ ನಡೆಸಿ ಹೊಸ ಅರ್ಥ ಕಂಡುಕೊಳ್ಳಿ.

ವಾರದ ಪ್ರಶ್ನೆಗಳು: ನೀವು ಪರಿಪೂರ್ಣ ಹೆಣ್ಣು / ಗಂಡು ಎಂದು ನಂಬಿದ್ದೀರಾ? ಹಾಗಾದರೆ ಇನ್ನೊಂದು ಲಿಂಗತ್ವವು ನಿಮ್ಮಲ್ಲಿ ಎಷ್ಟರ ಮಟ್ಟಿಗೆ ನೆಲೆಯಾಗಿದೆ ಎಂಬುದನ್ನು ಅರಿವು ಮಾಡಿಕೊಳ್ಳಿ. ಗೊತ್ತಾಗದಿದ್ದಲ್ಲಿ ನನ್ನೊಡನೆ ಹಂಚಿಕೊಳ್ಳಿ.

ಸಂಪರ್ಕಕ್ಕೆ: 8494933888; Email: vinod.chebbi@gmail.com